ಹುಡುಗನನ್ನೆಬ್ಬಿಸಿ ಶೆಡ್ಡಿನೊಳಗೆ ಮಲಗಿಸಿದಳು. ದಿನದ ಕೆಲಸ ಮಾಡುವಂತಿಲ್ಲ. ಹಿಟ್ಟು ಈ ವಾರಕ್ಕಾದೀತು. ಮುಂದೇನೋ ಗೊತ್ತಿಲ್ಲ. ಏನು ಮಾಡಬೇಕೋ ತೋಚದೆ ಸುಮ್ಮನೆ ನಿತ್ಯದ ಬೀದಿಯಲ್ಲಿ ನಡೆಯಲಾರಂಭಿಸಿದಳು. ದೇವಸ್ಥಾನದ ಹೆಬ್ಬಾಗಿಲು ಹಾದು ಹೋಗುವಾಗ ಕಾಲು ತಡೆಯಿತು. ಗೇಟಿನ ಬಳಿ ನಿಂತು ಮುಚ್ಚಿದ ಬಾಗಿಲು ನೋಡಿದಳು. "ಅವ್ವಾ... ಬಾಗ್ಲು ಹಾಕ್ಕಂಡು ನೀ ಹೊಂಟ್ರೆ ನಮ್ಮ ಅನ್ನದ ಗತಿ ಏನವ್ವಾ..." ಅನ್ನುತ್ತ ಕೈ ಮುಗಿದು ದಿನದ ರೂಢಿಯಂತೆ ಮುನ್ನಡೆದಳು. ಅವಳು ಹೂ ಮಾರುತ್ತಿದ್ದ ಖಾಲಿ ಸೈಟುಗಳಲ್ಲಿದ್ದ ಶೆಡ್ಡುಗಳೆಲ್ಲ ಭಣಗುಡುತ್ತಿದ್ದವು. ದೊಡ್ಡ ದೊಡ್ಡ ಗೇಟುಗಳ ಮುಂದೆ ನಳನಳಿಸುತ್ತಿದ್ದ ರಂಗೋಲಿ ಅಳಿಸಿಹೋಗಿತ್ತು. ಕೆಲವು ಗೇಟುಗಳಿಗೆ ಬೀಗ ಜಡಿದಿತ್ತು. ಪಾರಿಜಾತದ ಮರ ಕಣ್ಣಿಗೆ ಬೀಳುತ್ತಿದ್ದಂತೆ ಅಲ್ಲಿ ಯಾವಾಗಲೂ ಆ ಹೊತ್ತಿಗೆ ನೆಲದಲ್ಲಿ ಚೆಲ್ಲಾಡಿರುತ್ತಿದ್ದ ಪಾರಿಜಾತ ಹೆಕ್ಕುತ್ತಿದ್ದ ಹುಡುಗಿಗಾಗಿ ಕಣ್ಣಾಡಿಸಿದಳು. ಹುಡುಗಿ ಕಾಣಿಸಲಿಲ್ಲ. ಮರದ ಓನರ್ ಮನೆ ಗೇಟಿಗೆ ಬೀಗ ಬಿದ್ದಿತ್ತು. ಹೂ ಹೆಕ್ಕುವ ಹುಡುಗಿ ಆ ಮನೆಯ ಗಂಡ ಹೆಂಡಿರಿಬ್ಬರು ಕೆಲಸಕ್ಕೆ ಹೋದಾಗ ಮಗುವನ್ನೂ, ನಾಯಿಯನ್ನೂ ನೋಡಿಕೊಳ್ಳಲೆಂದು ಇಟ್ಟುಕೊಂಡ ಕೆಲಸದ ಹುಡುಗಿ. ಚುಮುಚುಮು ಬೆಳಗಿನಲ್ಲಿ ನಾಯಿಯನ್ನು ತುಸು ದೂರದ ಹೊಂಗೆ ಮರದಡಿ ಕಟ್ಟಿ ಹಾಕಿ, ಪಾರಿಜಾತ ಹೆಕ್ಕಿ ಓನರಮ್ಮನ ದೇವರ ಪಟಕ್ಕೆ ಮಾಲೆ ಸಿದ್ಧ ಮಾಡಿ ಕೊಡುವಲ್ಲಿಂದ ಹುಡುಗಿಯ ದಿನಚರಿ ಸುರುವಾಗುತ್ತದೆಂಬುದೂ ಮಾದೇವಿಗೆ ಗೊತ್ತಿತ್ತು. ಒಂದೆರಡು ಬಾರಿ ಮಾತಾಡಿಸಿದಾಗ ಸುಮ್ಮನೆ ಮುಖ ನೋಡಿ ಬೇಕೋ ಬೇಡವೊ ಎಂಬಂತೆ ತುಟಿ ಅರಳಿಸಿ ಚೂರುಪಾರು ಉತ್ತರಿಸಿ ತಟ್ಟನೆ ಹೂ ಹೆಕ್ಕಲು ಬಗ್ಗುತ್ತಿದ್ದಳು. ಇವರೂ ಊರಿಗೆ ಒಂಟೋಗಿದಾರೇನೋ ಅಂದುಕೊಳ್ಳುತ್ತ ಒಂದಿಷ್ಟು ಹೂ ಹೆಕ್ಕಿಕೊಂಡು ಮೂಸುತ್ತ ಮೂಗರಳಿಸುತ್ತಿದ್ದವಳ ಕಣ್ಣಿಗೆ ತುಸು ದೂರದ ಹೊಂಗೆ ಮರದ ನೆರಳಲ್ಲಿ ಗಂಟು ಅವುಚಿಕೊಂಡು ನಿಂತ ಹುಡುಗಿ ಕಣ್ಣಿಗೆ ಬಿದ್ದಳು. ಸೀದಾ ಅವಳ ಬಳಿ ತೆರಳಿ, ಇಲ್ಯಾಕೆ ನಿಂತಿದ್ದಿ ಮಗಾ ಕೇಳಿದಳು. ಹುಡುಗಿ ಮುಖ ಸಪ್ಪಗಾಯ್ತು. ಕಣ್ಣಲ್ಲಿ ದಳದಳ ನೀರು. ಮನೆಯವರು ನಾಯಿಯನ್ನೂ ಕಾರಲ್ಲಿ ಕೂರಿಸಿಕೊಂಡು ಬೆಳಕು ಹರಿಯುವ ಮೊದಲೇ ಊರಿಗೆ ಹೋಗಿದ್ದನ್ನೂ, ತನ್ನನ್ನು ಕರೆದೊಯ್ಯಲು ಮುರುಗ ಬರುವವರೆಗೆ ಇಲ್ಲಿಯೇ ನಿಂತಿರಲು ಹೇಳಿದ್ದಾರೆಂದೂ ಹೇಳಿದಳು. ಅವಳ ಕೈಯಲ್ಲಿ ಮೂರ್ನಾಲ್ಕು ಬಿಸ್ಕೆಟ್ ಪೊಟ್ಟಣವಿತ್ತು. ಮುರುಗ ನಿನಗೇನಾಗಬೇಕೆಂದು ಕೇಳಿದರೆ, ತನ್ನ ಇಲ್ಲಿಗೆ ತಮಿಳ್ನಾಡಿಂದ ಕರಕೊಂಡು ಬಂದಿದ್ದು ಅವನೇ, ತಿಂಗಳು ತಿಂಗಳು ಬಂದು ದುಡ್ಡು ಕೊಂಡೊಯ್ಯುತ್ತಿದ್ದವನು ಅವನೇ ಅಂದಳು. ಮಾದೇವಿಗೆ ಏನನಿಸಿತೋ, ನನ್ನ ಶೆಡ್ಡಿಗೆ ಬರ್ತೀಯ ಮಗಾ ಕೇಳಿದಳು. ಹುಡುಗಿಯ ಮುಖ ಅವಳ ಅಂಗೈಯಲ್ಲಿದ್ದ ಪಾರಿಜಾತದಂತೆ ಅರಳಿತು. ಆಯ್ತೆಂಬಂತೆ ತಲೆ ಆಡಿಸಿದವಳು, "ಪಾರಿಜಾತ ಆಯ್ಕಂಡು ಹೋಗುವಾ. ನಾನು ಮಾಲೆ ಮಾಡ್ತೀನಿ ಅಂದಳು. ಮಾದೇವಿಗೆ ಮುದ್ದು ಉಕ್ಕಿ ಬಂತು. "ಬಾರವಾ, ಇನ್ನೊಂದೀಟು ಆಯ್ಕೊಳ್ಳೋಣ. ನಾನೇ ನಿಂಗೆ ಕೂದ್ಲ ಬಾಚ್ಕೊಡ್ತೀನಿ. ಹೂವ ಮುಡಸ್ತೀನಿ'' ಅನ್ನುತ್ತ ಮರದ ಬುಡಕ್ಕೆ ನಡೆದಳು.


**ಅನುಪಮಾ ಪ್ರಸಾದ್**

ಹುಟ್ಟಿದೂರು ಉತ್ತರ ಕನ್ನಡದ ಶಿರಸಿ. ಬಾಳಿದೂರು ದಕ್ಷಿಣ ಕನ್ನಡದ ಉಜಿರೆ. ಬಾಳುತ್ತಿರುವುದು ಗಡಿನಾಡು ಕಾಸರಗೋಡು. ಸದ್ಯದ ವಾಸ ಬೆಂಗಳೂರು.

'ಚೇತನಾ', 'ಕರವೀರದ ಗಿಡ', 'ದೂರತೀರ', 'ಜೋಗತಿ ಜೋಳಿಗೆ' ಎಂಬ ಕಥಾಸಂಕಲನಗಳನ್ನು, 'ಪಕ್ಕಿ ಹಳ್ಳದ ಹಾದಿಗುಂಟ' ಎಂಬ ಕಾದಂಬರಿಯನ್ನು, 'ಅರ್ಧ ಕಥಾನಕ' (ಕಥೆಗಾರ ಎಂ. ವ್ಯಾಸರ ಕುರಿತಾದ ನಿರೂಪಣಾ ಕೃತಿ) ಎಂಬ ಜೀವನಚಿತ್ರವನ್ನು ಪ್ರಕಟಿಸಿದ್ದಾರೆ.